ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬೆಂಗಳೂರು, ಮಂಗಳವಾರ ೨೧ನೇ ಮಾರ್ಚ್ ೧೯೮೪, ಫಾಲ್ಗುಣ ೨೦, ೧೯೦೫ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧-೦೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್)ರವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಚಿಕ್ಕನಾಯ್ಕನ ಹಳ್ಳಿಯಂ ಮುಶಿಫಟ್ಟ ಹಂದನಕೆರೆ ರಸ್ತೆ ದುರಸ್ತಿಯಾಗಿರುವುದು

೩೬. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮುಖ್ಯ ರಸ್ತೆಗಳಲ್ಲಿ ಒಂದಾದ ಚಿಕ್ಕನಾಯಕನಹಳ್ಳಿ ಮತ್ತಿಘಟ್ಟ—ಹಂದನಕೆರೆ ರಸ್ತೆಯು ವಾಹನಗಳು ಓಡಾಡದಷ್ಟು ಕೆಟ್ಟು ಹೋಗಿದ್ದು ಈ ಬಗ್ಗೆ ಕಳೆದ ೩ ವರ್ಷಗಳಿಂದ ಸರ್ಕಾರದವರ ಗಮನಕ್ಕೆ ತಂದರೂ ಸಹ. ಇದುವರೆಗೆ ದುರಸ್ತಿ ಕಾರ್ಯ ಕೈಗೊಳ್ಳದಿರುವುದಕ್ಕೆ ಕಾರಣಗಳೇನು ?

ಆ) ದುರಸ್ತಿ ಕಾರ್ಯವನ್ನು ಕೈಗೊಳ್ಳುವಲ್ಲಿ ಆಗುತ್ತಿರುವ ಈ ವಿಳಂಬಕ್ಕೆ ಕಾರಣವೇನು ?

ಇ) ದುರಸ್ತಿ ಕಾರ್ಯವನ್ನು ಪ್ರಾರಂಭಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಸಚಿವರು).—

ಅ) ಚಿಕ್ಕನಾಯಕನಹಳ್ಳಿ—ಮತ್ತಿಘಟ್ಟ—ಹಂದನಕೆರೆ ರಸ್ತೆಯು ವಾಹನಗಳ ಸಂಚಾರಕ್ಕೆ ಅಡಚಣೆಯಾಗುವಷ್ಟು ಹಾದುರಸ್ತಿಯಾಗಿರುವುದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಅಂದರೆ ೧೯೮೬—೮೭, ೧೯೮೭—೮೮ ಮತ್ತು ೧೯೮೮—೮೯ (ಜನವರಿ ೧೯೮೯ರವರೆಗೆ) ಈ ರಸ್ತೆಯ ಆಯ್ದ ಭಾಗಗಳ ದುರಸ್ತಿಯನ್ನು ಮಾಡಲಾಗಿದೆ.

ಆ) ಈ ರಸ್ತೆಯ ಆಯ್ದ ಭಾಗಗಳ ದುರಸ್ತಿಯನ್ನು ವಿಳಂಬವಿಲ್ಲದೆ ಮಾಡಲಾಗುತ್ತಿದೆ;

ಇ) ಪ್ರತಿ ವರ್ಷವೂ ದುರಸ್ತಿ ಮತ್ತು ಅಭಿವೃದ್ಧಿ ಕಾರ್ಯವನ್ನು ಹಣದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಮಾಡಲಾಗುತ್ತದೆ.

ಶ್ರೀ ಬಿ. ಲಕ್ಕಪ್ಪ.— ಅಧ್ಯಕ್ಷರೇ, ಈ ಉತ್ತರ ಸಮಂಜಸವಾದುದಲ್ಲ ಎಂದು ನನ್ನ ಅನಿಸಿಕೆ. ಏಕೆಂದರೆ ದಿನಬೆಳಗೆದ್ದರೆ ಆ ರಸ್ತೆಯಲ್ಲೇ ನಾವು ಓಡಾಡುವುದು. ಯಾವುದೇ ರಸ್ತೆಯನ್ನೂ ದುರಸ್ತಿ ಮಾಡಿಲ್ಲ, ಮೂರು ವರ್ಷದಿಂದ ಕೇಳುತ್ತಿದ್ದೇನೆ. ಇದು ೨೫ ಕಿ ಮಿ. ಇರುವ ಪ್ರಮುಖ ರಸ್ತೆ. ಇದರಲ್ಲಿ ೧೨ ಖಾಸಗಿ ಬಸ್‌ಗಳು ೫ ಸರ್ಕಾರಿ ಬಸ್‌ಗಳು ದಿನನಿತ್ಯ ಓಡಾಡುತ್ತಿವೆ. ಈ ಉತ್ತರದಿಂದ ಸಚಿವರಿಗೆ ಸಮಾಧಾನವಾಗಿದ್ದರೆ ಅವರಂ ನನ್ನ ಜತೆ ಬರಲಿ, ನಾನೂ ಅವರ ಜೊತೆ ಹೋಗುತ್ತೇನೆ.

ಅವರೇ ಸ್ಥಳ ಪರಿಶೀಲನೆ ಮಾಡಲಿ. ಒಂದು ವೇಳೆ ಒಂದು ಚಿಟಿಕೆ ಮಣ್ಣಾದರೂ ಹಾಕಿ ದುರಸ್ತಿ ಮಾಡಿದ್ದಲ್ಲಿ ನಾನು ರಾಜೀನಾಮೆ ಕೊಡುತ್ತೇನೆ. ಹಾಲಿ ಆ ರಸ್ತೆ ಮೇಲೆ ಟೂವೀಲರ್ಸ್' ಫೋರ್ ವೀಲರ್ಸ್ ಯಾವುದೂ ಹೋಗಲಾಗುವುದಿಲ್ಲ. ದಯವಿಟ್ಟು ಇದನ್ನು ದುರಸ್ತಿ ಮಾಡಿಸುವ ಆಶ್ವಾಸನೆ ಕೊಡಬೇಕು ಇಲ್ಲವಾದ್ರೆ ನನ್ನ ಜತೆ ಸ್ಥಳಪರಿಶೀಲನೆಗೆ ಅವರು ಬರಬೇಕು.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.— ಇದು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ೩ ಕಿಲೋಮೀಟರ್‌ಗೆ ಡಾಂಬರು ಹಾಕಿ ಉಳಿದ ೨೫ ಕಿ.ಮೀ. ಮಣ್ಣಿನದಾಗಿದೆ. ವಾಹನ ಸೌಕರ್ಯಕ್ಕೆ ತೊಂದರೆಯಾಗುವಷ್ಟು ಕೆಟ್ಟಿಲ್ಲ, ಇದನ್ನು ದುರಸ್ತಿ ಮಾಡಲಾಗುತ್ತಿದೆ. ಇದರ ರಿಪೇರಿಗಾಗಿ ೮೬—೮೭ರಲ್ಲಿ ೧.೪೫.೦೦೦ ರೂ ಖರ್ಚಾಗಿದೆ, ೧೯೮೭–೮೮ರಲ್ಲಿ ೧,೦೩,೮೦೦ ರೂ ಖರ್ಚಾಗಿದೆ. ೧೯೮೮–೮೯ರಲ್ಲಿ ೧ ಲಕ್ಷ ಖರ್ಚಾಗಿದೆ, ಮುಂದಿನ ವರ್ಷಕ್ಕೆ ೧, ೭,೦೦ ಅಂದಾಜು ಮಾಡಲಾಗಿದೆ. ಹಣದ ಪರಿಸ್ಥಿತಿ ನೋಡಿಕೊಂಡು ಹಂತ ಹಂತವಾಗಿ ಕೆಲಸ ಮಾಡಲಾಗುವುದು, ಸದಸ್ಯರು ಹೇಳಿದಂತೆ ಅಲ್ಲಿ ೫ ಬಸ್ ಓಡಾಡುತ್ತಿಲ್ಲ, ೨೦ ಬಸ್ ಓಡಾಡುತ್ತಿವೆ.

ಶ್ರೀ ಬಿ. ಲಕ್ಕಪ್ಪ.— ಅಧ್ಯಕ್ಷರೇ, ಇವರು ಯಾವುದೋ ಬೇರೆ ರಸ್ತೆ ಮಾಹಿತಿ ತಂದಿದ್ದಾರೆ. ಸರ್ಕಾರವನ್ನು ಸಚಿವರನ್ನು ಟೀಕಿಸಬೇಕೆಂದು ನಾನು ಸುಮ್ಮನೆ ಹೇಳುತ್ತಿಲ್ಲ. ಈ ಮನೆಯ ಸದಸ್ಯನಾಗಿ ಕಣ್ಣಾರೆ ಕಂಡುದುದನ್ನು ಹೇಳುತ್ತಿದ್ದೇನೆ. ಆಲ್ಲದೇ ಅಲ್ಲಿ ಡಾಂಬರು ಹಾಕಿರುವುದು ಒಂದು ಕಿ.ಮೀಾ, ಮಾತ್ರ ಶೆಟ್ಟಿಕೆರೆಯಿಂದ ಮೇಲಳ್ಳಿಯವರೆಗೆ. ಬೇರೆಡೆ ಎಲ್ಲಿಯೂ ಹಾಕಿಲ್ಲ ಯಾವುದೇ ರಿಪೇರಿಯೂ ನಡೆದಿಲ್ಲ. ನನ್ನ ಜತೆ ನೀವು ಬನ್ನಿ, ನಿಮ್ಮ ವಾಹನ ಅಲ್ಲಿ ಹೋಗಿಬಿಟ್ಟರೆ ನಾನು ಈ ಪ್ರಶ್ನೆಯನ್ನು ಕೇಳುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ — ಇಷ್ಟು ಹೊತ್ತಿಗಾಗಲೇ ಡಾಂಬರು ಹಾಕಿದೆ ಎಂದು ಕಂಟ್ರಾಕ್ಟರ್ ದುಡ್ಡು ತಗೊಂಡುಬಿಟ್ಟಿರುತ್ತಾನೆ ಬಿಡಿ.

ಶ್ರೀ ಎಂ. ಕೃಷ್ಣಾರೆಡ್ಡಿ.— ನೀವು ಬಂದು ನನ್ನ ಬಳಿ ಚರ್ಚೆ ಮಾಡಿ.

ಶ್ರೀ ಬಿ. ಲಕ್ಕಪ್ಪ.—ದಿನ ಸಾರ್ವಜನಿಕರು ಓಡಾಡುವ ರಸ್ತೆ ಸ್ವಾಮಿ ಇದು, ಬೈರಾಪೇಟಿಯಿಂದ ಹಂದನ ಕೆರೆಗೆ ಸಣ್ಣ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಬೇರೆ ರಸ್ತೆ ಇಲ್ಲ.

ಶ್ರೀ ಎಂ. ಕೃಷ್ಣಾರೆಡ್ಡಿ.— ನಾನು ಈಗಲೇ ಅಧಿಕಾರಿಗಳಿಗೆ ಸೂಚನೆ ಕೊಟ್ಟು ತಕ್ಷಣ ಹೋಗಿ ಸರಿಯಾದ ಮಾಹಿತಿ ತರಲು ವ್ಯವಸ್ಥೆ ಮಾಡುತ್ತೇನೆ.

ರಾಜ್ಯದಲ್ಲಿ ವರದಕ್ಷಿಣೆ ಕಿರುಕುಳದಿಂದ ಸತ್ತವರ ಸಂಖ್ಯೆ

೪೫೩. ಶ್ರೀ ಗೋಪಾಲ ಮುಸುಂದ ಕಾನಡೆ (ಸಿರ್ಸಿ) — ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ವರದಕ್ಷಿಣೆ ಕಿರುಕುಳದಿಂದ ೧೯೮೭ರಿಂದ ಇದುವರೆಗೆ ಸತ್ತವರ ಸಂಖ್ಯೆ ಎಷ್ಟು ?

ಆ) ಇಂತಹ ಕಿರುಕುಳ ಕೊಟ್ಟವರಿಗೆ ಯಾವ ರೀತಿಯ ಶಿಕ್ಷೆಗೊಳಪಡಿಸಲಾಗಿದೆ? (ವಿವರ ಒದಗಿಸುವುದು)

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ರಾಜ್ಯದಲ್ಲಿ ೧೯೮೭,೧೯೮೮ ಮತ್ತು ೧೯೮೯ರ ಫೆಬ್ರುವರಿ ತಿಂಗಳವರೆಗೆ ವರದಿಯಾಗಿರುವ ವರದಕ್ಷಿಣೆ ಕಿರುಕುಳದಿಂದ ಸತ್ತವರ ಸಂಖ್ಯೆ ಈ ಕೆಳಕಂಡಂತೆ ಇದೆ.

೧೯೮೭	—	೧೦೬
೧೯೮೮	—	೧೮೨
೧೯೮೯	—	೩೦

(ಫೆಬ್ರುವರಿ ೨೮ರವರೆಗೆ)

ಆ) ಕಾಯಿದೆ ಅನ್ವಯ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಗೋಪಾಲ ಮುಕಂದ ಕಾನಡೆ.— ನೀವು ಹೇಳಿದ ಪ್ರಕಾರ ಎಷ್ಟು ಕೇಸ್‌ಗಳು ಸಿಐಡಿಗೆ ಹೋಗಿದೆ ಯಾವ್ಯಾವ ಜಾತಿಯವರು ಇದ್ದಾರೆ.